ಇ) ಮೂಡಬಿದರೆಯಲ್ಲಿ ಸೆಕ್ಷನ್ ಆಫೀಸನ್ನು ಸಬ್-ಡಿವಿಜನ್ ಆಫೀಸಾಗಿ ಪರಿವರ್ತಿಸಲಾಗುವುದೆಂದು ಸದನದಲ್ಲಿ ಇತ್ತಿದ್ದ ಆಶ್ವಾಸನೆಯನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು): ಎ) ಮೂಡಬಿದರೆಯಲ್ಲಿ ಸಬ್-ಸ್ಟೇಷನ್ ಕಾರ್ಯಾರಂಭ ಮಾಡಿದ ನಂತರ ವಿದ್ಯುತ್ ಸರಬರಾಜು ಗಣನೀಯವಾಗಿ ಸುಧಾರಣೆ ಗೊಂಡಿದೆ ಮತ್ತು ಹೆಚ್ಚಿನ ಪ್ರಮಾಣದ ತೊಂದರೆ ಉಂಟಾಗುತ್ತಿಲ್ಲ.

ಬಿ) ಮೂಡಬಿದರೆಯ 110-11 ಕೆವಿ ಸಬ್-ಸ್ಟೇಷನ್ನಿನಲ್ಲಿ ಈಗಾಗಲೇ 10 ಎಂವಿಎ ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್ ಕಾರ್ಯನಿರ್ವಹಿಸುತ್ತಿದ್ದೆ. ಹೀಗಾಗಿ ಈ ಸಬ್-ಸ್ಟೇಷನ್ನಿಗೆ ಪವರ್ ಟ್ರಾನ್ಸ್ಫಾರ್ಮರ್ನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಸದರೀ ವಿದ್ಯುತ್ ಸಬ್-ಸ್ಟೇಷನ್ನಿನ ಪಾಳಿ ಕೆಲಸ ಮತ್ತು ನಿರ್ವಹಣೆ ಕೆಲಸಕ್ಕೆ ಅಗತ್ಯವಿರುವ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ನಿರ್ವಹಣೆ ಕೆಲಸಕ್ಕೆ ಮಂಜೂರಾಗಿರುವ ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಲಾಗಿದ್ದು, ಪಾಳಿ ಕೆಲಸಕ್ಕೆ ಮಂಜೂರಾಗಿರುವ ಹುದ್ದೆಗಳನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸಿ) ಇದರ ಬಗ್ಗೆ ಅಗತ್ಯವಿರುವ ಅಂಕಿ ಅಂಶ ಮತ್ತು ಮಾಹಿತಿಗಳನ್ನು ಸಂಗ್ರಹಿಸಲಾಗಿದ್ದು, ಪ್ರಸ್ತಾವನೆಯನ್ನು ರೂಪಿಸಲಾಗುತ್ತಿದೆ. ಆದಷ್ಟು ಶೀಘ್ರಗತಿಯಲ್ಲಿ ಪ್ರಸ್ತಾವನೆಯನ್ನು ರೂಪಿಸಿ, ಮಂಡಳಿಯ ಮಂಜೂರಾತಿ ಪಲ್ಲಿಸಲಾಗುವುದು.

ಕಟೀಲು ಬೈಪಾಸು ರಸ್ತೆ ನಿರ್ಮಾಣ ಕುರಿತು

578-ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ ಅಗಲ ಕಿರಿದಾದ ರಸ್ತೆಯಿಂದಾಗಿ ಯಾವಾಗಲೂ ವಾಹನ ತಪ್ಪ ಇರುವ ಕಾರಣ, ಬೈಪಾಸು ರಸ್ತೆ ರಚನೆ ಯಾವಾಗ ಮಾಡಲಾಗುವುದು?

ಬಿ) ಕಳೆದ ವರ್ಷದ ಅಧಿವೇಶನದಲ್ಲಿ ಈ ರಸ್ತೆಯನ್ನು ಕೂಡಲೇ ಮಾಡಲಾಗುವುದು ಎಂದು ತಿಳಿಸಿದರೂ ಸರಕಾರ ಈ ತನಕ ಕ್ರಮ ಕೈಗೊಳ್ಳದಿರಲು ಕಾರಣವೇನು?

ಸಿ) ಈ ಬೈಪಾಸ್ ರಸ್ತೆ ರಚಿಸಲು ಎಷ್ಟು ಖರ್ಚಾಗಬಹುದು?

ಶ್ರೀ ಕೆ.ಪಿಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಎ) ಸದರಿ ಬೈಪಾಸ್ ರಸ್ತೆ ನಿರ್ಮಾಣಕ್ಕೆ ಸುಮಾರು 11 ಎಕರೆ ಖಾಸಗಿ ಜಮೀನನ್ನು ಭೂಸ್ವಾಧೀನ ಪಡಿಸಬೇಕಿದ್ದು, ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಬಿ) 1993-94ನೇ ಸಾಲಿನ ಆಯವ್ಯಯದಲ್ಲಿ ಅನುದಾನದ ಕೊರತೆಯಿಂದಾಗಿ ಈ ಕಾಮಗಾರಿಯನ್ನು ತೆಗೆದುಕೊಳ್ಳಲಾಗಲಿಲ್ಲ. 1994-95ನೇ ಸಾಲಿನಲ್ಲಿ ಈ ಕಾಮಗಾರಿಯನ್ನು ತೆಗೆದುಕೊಳ್ಳುವ ವಿಷಯವು ಪರಿಶೀಲನೆಯಲ್ಲಿದೆ.

ಸಿ) ಸುಮಾರು 25 ಲಕ್ಷ ರೂ.ಗಳ ಅಂದಾಜು ಆಗುತ್ತದೆ.

ಕಂದಿ ಅಣೆಕಟ್ಟು ನಿರ್ಮಾಣ ಕುರಿತು

579 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?